For More Job News Visit : www.kpscvaani.com

ನಿರ್ಮಿತಿ ಕೇಂದ್ರ ರಾಯಚೂರು

ಸರ್ವೆ ನಂ: 809 (ಎ), ಬೋಳಮಾನದೊಡ್ಡಿ ರೋಡ್, ರಾಯಚೂರು-584103

ಇ-ಮೇಲ್:- pmnkrcr@gmail.com ದೂರವಾಣಿ ಸಂ: 08532-200260

ಸಂಖ್ಯೆ: ಆಡಳಿತ/ಸಿಬ್ಬಂದಿ/2021-22 ದಿನಾಂಕ: 02.02.2022

ಪ್ರಕಟಣೆ

ರಾಯಚೂರು ಜಿಲ್ಲಾ ನಿರ್ಮಿತಿ ಕೇಂದ್ರದಲ್ಲಿ ಈ ಕೆಳಗಿನ ಹುದ್ದೆಗಳಿಗೆ ಸಂಪೂರ್ಣ ತಾತ್ಕಾಲಿಕ ಹಾಗೂ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

1) ಹುದ್ದೆ : **ಯೋಜನಾ ನಿರ್ದೇಶಕರು (Project Director) - 01 ಹುದ್ದೆ**, ವಿದ್ಯಾರ್ಹತೆ:ಬಿ.ಇ/ಬಿ.ಟೆಕ್ ಸಿವಿಲ್ ಪದವಿ ಹೊಂದಿರಬೇಕು (ಎಂ.ಟೆಕ್/ ಎಂ.ಇ ಪದವೀಧರರಿಗೆ ಆದ್ಯತೆ), ವಯಸ್ಸು : ಗರಿಷ್ಠ ವಯೋಮಿತಿ 45 ವರ್ಷ. ಅನುಭವ : ಕನಿಷ್ಠ 15 ವರ್ಷಗಳ ಕಾಲ ಸರ್ಕಾರಿ/ಅರೆ ಸರ್ಕಾರಿ ಇಲಾಖೆಯ ಸಿವಿಲ್ ಕಾಮಗಾರಿಗಳ ಅನುಷ್ಠಾನ ಮತ್ತು ನಿರ್ವಹಣೆಯಲ್ಲಿ ಕೆಲಸ ಮಾಡಿದ ಅನುಭವ ಹೊಂದಿರಬೇಕು ಮತ್ತು ಕಡ್ಡಾಯವಾಗಿ ರಾಯಚೂರು ನಗರದಲ್ಲಿ ವಾಸಿಸಲು ಸಿದ್ಧರಿರಬೇಕು. ಕನಿಷ್ಠ 5 ವರ್ಷಗಳ ಅವಧಿಗೆ ನಿರ್ಮಿತಿ ಕೇಂದ್ರದಲ್ಲಿ ಯೋಜನಾ ನಿರ್ದೇಶಕರಾಗಿ ಕೆಲಸ ನಿರ್ವಹಿಸಿ ಅನುಭವ ಹೊಂದಿದವರಿಗೆ ಅಥವಾ ಕೆಆರ್‌ಐಡಿಎಲ್/ಲೋಕೋಪಯೋಗಿ/ಪಂಚಾಯತ್ ರಾಜ್ ಇಲಾಖೆಗಳಲ್ಲಿ ತತ್ಸಮಾನ ಹುದ್ದೆಯಲ್ಲಿ ಕೆಲಸ ನಿರ್ವಹಿಸಿ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು

2) ಹುದ್ದೆ: **ಕಿರಿಯ ಅಭಿಯಂತರರು (Junior Engineer) - 02 ಹುದ್ದೆ**, ವಿದ್ಯಾರ್ಹತೆ: ಡಿಪ್ಲೊಮಾ/ಬಿ.ಇ/ ಬಿ.ಟೆಕ್ ಸಿವಿಲ್ ಪದವಿ ಹೊಂದಿರಬೇಕು, ವಯಸ್ಸು: 30-40 ವರ್ಷ, ಅನುಭವ: ಕನಿಷ್ಠ 5 ವರ್ಷಗಳ ಕಾಲ ಸಿವಿಲ್ ಕಾಮಗಾರಿಗಳ ನಿರ್ವಹಣೆಯಲ್ಲಿ ಕೆಲಸ ಮಾಡಿದ ಅನುಭವ ಇದ್ದು ಆಟೋಕ್ಯಾಡ್‌ನಲ್ಲಿ ಪರಿಣಿತಿ ಹೊಂದಿರಬೇಕು. ಸಿವಿಲ್ ಕಾಮಗಾರಿಗಳನ್ನು ಸ್ವತಂತ್ರವಾಗಿ ನಿರ್ವಹಿಸಿದ ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು.

3) ಹುದ್ದೆ: **ಲೆಕ್ಕಿಗರು (Accountant) - 01 ಹುದ್ದೆ**, ವಿದ್ಯಾರ್ಹತೆ : ಬಿ.ಕಾಂ. ಪದವಿಯೊಂದಿಗೆ ಟ್ಯಾಲಿ ಜ್ಞಾನ ಹೊಂದಿರಬೇಕು (ಎಂ.ಕಾಂ ಪದವೀಧರರಿಗೆ ಆದ್ಯತೆ), ವಯಸ್ಸು :30-40 ವರ್ಷ, ಅನುಭವ : ಕನಿಷ್ಠ 5 ವರ್ಷಗಳ ಕಾಲ ಅಧಿಕೃತ ಕಟ್ಟಡ ನಿರ್ಮಾಣ ಸಂಸ್ಥೆಯಲ್ಲಿ ಅಥವಾ ಯಾವುದೇ ಸಂಸ್ಥೆಗಳಲ್ಲಿ ಅನುಭವ ಹೊಂದಿರಬೇಕು, ಜಿ.ಎಸ್.ಟಿ & ಇತರೆ ತೆರಿಗೆಗಳಲ್ಲಿ ಪರಿಣಿತಿ ಹೊಂದಿರಬೇಕು. ಚಾರ್ಟರ್ಡ್ ಅಕೌಂಟೆಂಟ್ (CA) ಅಧೀನದಲ್ಲಿ ಕೆಲಸ ಮಾಡಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

4) ಹುದ್ದೆ: **ವಾಹನ ಚಾಲಕರು (Vehicle Driver) - 01 ಹುದ್ದೆ**, ವಿದ್ಯಾರ್ಹತೆ: ಕನಿಷ್ಠ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು, ವಯಸ್ಸು : 22-28 ವರ್ಷ, ಅನುಭವ : ಅಧಿಕೃತ ಸಂಸ್ಥೆಯಲ್ಲಿ ಕನಿಷ್ಠ 10 ವರ್ಷಗಳ ಕಾಲ ವಾಹನ ಚಾಲನೆಯಲ್ಲಿ ಅನುಭವ ಹೊಂದಿರಬೆಕು. ಅರ್ಜಿದಾರರು ಕಡ್ಡಾಯವಾಗಿ Light/Heavy Motor Vehicle ವಾಹನದ ಚಾಲನೆಯ ಪರವಾನಿಗೆ ಹೊಂದಿದ್ದು ಅರ್ಜಿ ಸಲ್ಲಿಸುವಾಗ ಡ್ರೈವಿಂಗ್ ಲೈಸೆನ್ಸನ (DL) ಝರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.

ಅರ್ಹ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ವಿದ್ಯಾರ್ಹತೆ ಹಾಗೂ ಇತರೆ ವಿವರಗಳ ಅನುಭವದ ಬಗ್ಗೆ ಸ್ವ-ಧೃಢೀಕರಣ ದಾಖಲಾತಿಗಳೊಂದಿಗೆ (ಝೆರಾಕ್ಸ ಪ್ರತಿಗಳು) ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ರಾಯಚೂರು ಇವರಿಗೆ ದಿನಾಂಕ: 07.03.2022 ರ ಸಾಯಂಕಾಲ 5.30ರ ಒಳಗಾಗಿ ಸಲ್ಲಿಸುವುದು. ಅರ್ಜಿಗಳ ಸ್ವೀಕಾರ/ತಿರಸ್ಕಾರ ಮಾಡುವ ಅಧಿಕಾರವನ್ನು ಮಾನ್ಯ ಅಧ್ಯಕ್ಷರು ನಿರ್ಮಿತಿ ಕೇಂದ್ರ ರಾಯಚೂರು ಹಾಗೂ ಜಿಲ್ಲಾಧಿಕಾರಿಗಳು ರಾಯಚೂರು ಇವರಿಗೆ ಕಾಯ್ದಿರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ವಿಳಾಸ: ನಿರ್ಮಿತಿ ಕೇಂದ್ರ ರಾಯಚೂರು, ಸರ್ವೆ ನಂ: 809 (ಎ), ಬೋಳಮಾನದೊಡ್ಡಿ ರೋಡ್, ರಾಯಚೂರು-584103. ದೂರವಾಣಿ ಸಂ: 08532-200260

ಸಹಿ/- ಅಧ್ಯಕ್ಷರು, ನಿರ್ಮಿತಿ ಕೇಂದ್ರ ರಾಯಚೂರು
ಹಾಗೂ ಜಿಲ್ಲಾಧಿಕಾರಿಗಳು ರಾಯಚೂರು

ವಾ.ಸಾ.ಸಂ.ಇ/ರಾಯಚೂರು/606/ಎಂ.ಸಿ.&ಎ/2021-22